


ನನ್ನ ಪ್ರೇಮದ ಕಂಗಳ ತೆರೆಸಿದ್ದೀಯ. ನಿನ್ನಲ್ಲಿರುವ ಹಪಾಹಪಿಯ ನಾನೆಲ್ಲಿಯೂ ಕಂಡಿಲ್ಲ. ನೀ ಅರಸುತ್ತಿರುವ ಆತ್ಮಸಖಿ ನಾನೇ ಎನ್ನುತ್ತಿಲ್ಲ. ಎಲ್ಲಾ ಇದ್ದರೂ ನನ್ನೊಂಟಿತನ ಮಾತ್ರ ಬಿಡದೇ ಕಾಡುತ್ತಿದೆ. ನಿನ್ನಂತೆಯೇ ನನಗೂ ಸದಾ ಅನಿಸುತ್ತದೆ. ನಿಜ ಪ್ರೇಮದ ಹಣತೆಯಲ್ಲಿ ಒಮ್ಮೆಯಾದರೂ ನನ್ನ ನಾ ಬೆಳಗಿಸಿಕೊಳ್ಳಬೇಕೆಂದು. ಹೇಗೆ ಬೇಕೋ ಹಾಗೆ, ನಿನ್ನಿಷ್ಟದಂತೆ. ನಿನ್ನ ಸಂತೋಷದ ಹೊರತು ಬೇರೇನೂ ಬೇಡವೆನಿಸುತ್ತಿದೆ.

ನೀ ಅರಸುವ ಕೃಷ್ಣನೆಂದು ಭಾವಿಸುವ...'

ಝುಲ್! ಎಂದು ಎದೆಬಡಿತ ಕ್ಷಣ ತಪ್ಪಿದಂತಾಯಿತು. ನನ್ನ ಪತ್ರವನ್ನು ಯಾರೋ ನೋಡಿದ್ದಾರೆ! ಈ ಪತ್ರ ಬ್ಯಾಗಿಗೆ ಹೇಗೆ ಬಂತು? ಹಾಗಾದರೆ ನನ್ನ ಪತ್ರವೆಲ್ಲಿ? ಬ್ಯಾಗಿನಲ್ಲೆಲ್ಲಾ ಎಷ್ಟು ತಡಕಾಡಿದರೂ ಸಿಗಲಿಲ್ಲ! ಅದನ್ನು ತೆಗೆದುಕೊಂಡು ಇದನ್ನು ಇಟ್ಟಿದ್ದರೋ? ನನ್ನ ಮೂರ್ಖತನಕ್ಕೆ ಮಿತಿಯೇ ಇಲ್ಲ. ಬೋರ್ಡಿನಿಂದ ತೆಗೆಯುವ ಮುನ್ನ ಪತ್ರವನ್ನೊಮ್ಮೆ ನೋಡಬೇಕಿತ್ತು. ಆಫೀಸಿನ ಎಲ್ಲರನ್ನೂ ಒಮ್ಮೆ ಗಮನಿಸಿದೆ. ಎಲ್ಲರೂ ಅವರವರ ಕೆಲಸದಲ್ಲಿ ತೊಡಗಿಕೊಂಡಿದ್ದರು. ರಾಘವನು ಸಹಾ! ಅವನಿಗೆ ಇಷ್ಟೊಂದು ಚೆನ್ನಾಗಿ ಭಾವ ವ್ಯಕ್ತಪಡಿಸಲಾಗುವುದಿಲ್ಲವೆನಿಸುತ್ತದೆ. ಅವನ ಎಲ್ಲಾ ಪದ್ಯಗಳ ಓದಿರುವುದರಿಂದ ಅವನಿಗೂ ಮೊದಲೇ ಅವನ ಭಾಷೆಯ ತಿಳಿಯಬಲ್ಲೆನೇನೋ. ಆದರೂ ನಂಬಲಾಗುವುದಿಲ್ಲ. ಆ ದಿನವೆಲ್ಲಾ ಪತ್ರದ ಎಂಜಲು ಯಾರ ಕಣ್ಣಿಗೆ ಅಂಟಿದೆಯೆಂದು ಎಲ್ಲರ ಕಂಗಳ ತಡಕಾಡುತ್ತಿದ್ದೆ.

ಕೆಲವೊಮ್ಮೆ ಬೇಡವೆಂಬುದು ಬೇಕಾಗಿಯೇ ಅಂಟಿಕೊಳ್ಳುತ್ತದೆನ್ನುವುದಕ್ಕೆ ಉದಾಹರಣೆಯೆಂಬಂತೆ ನಟರಾಜ ಬಂದು ಬಾಸ್ ಕರೆಯುತ್ತಿದ್ದಾರೆ ಎಂದ. ನನ್ನ ಬದುಕಿನ ಎಲ್ಲ ತಿರುವುಗಳಲ್ಲಿಯೂ ಈ ಬಾಸ್ ಎನಿಸಿಕೊಂಡವರು ತಲೆ ತೂರಿಸಿ ಬಂದುಬಿಡುತ್ತಾರೆ. ಅದುವರೆಗೂ ಎಲ್ಲಿರುತ್ತಾರೋ ಏನೋ. ಆದರೆ ಸಮಯಕ್ಕೆ ತಕ್ಕಂತೆ ಹಾಜರ್. ಚೇಂಬರ್‌ನ ಒಳ ಹೋಗುತ್ತಿದ್ದಂತೆ ತಾನು ಎದ್ದುನಿಂತು, ನನಗೆ ಕುಳಿತುಕೊಳ್ಳುವಂತೆ ಹೇಳಿದರು. ಮೊದಲಿನಿಂದಲೂ ಈ ಮರ್ಯಾದೆ ನೀಡುತ್ತಿದ್ದಾರೆಂಬುದಷ್ಟೇ ಈ ಜಾಗದಲ್ಲಿ ನನ್ನ ಪಾಲಿಗಿದ್ದದ್ದು.

'ನಿನ್ನ ಜೊತೆ ತುಂಬಾ ಮಾತಾಡ್ಬೇಕು, ಸಂಜೆ ಎಲ್ಲಿಯಾದ್ರೂ ಹೋಗೋಣ.'

'ಏನ್ ವಿಷ್ಯ, ಏನ್ ಮಾತಾಡ್ಬೇಕಿತ್ತು?'

'ತುಂಬಾ ಅಂತ ಹೇಳಿದ್ನಲ್ಲಾ.'

ತಲೆಯಾಡಿಸಿ ಬಂದುಬಿಟ್ಟೆ. ಅಯ್ಯೋ! ನನ್ನ ಪತ್ರವ ನೋಡಿ ಇವರೇನಾದರೂ ಪ್ರತಿಕ್ರಿಯಿಸಿದರಾ! ತತ್, ಕ್ಷಣ ಗಾಬರಿಯಾಯಿತು. ಹಾಗೇನಾದರೂ ಆಗಿದ್ದಲ್ಲಿ ಕೆಲಸ ಬಿಟ್ಟು ಹೊರಟುಬಿಡುತ್ತೇನಷ್ಟೆ. ಎಲ್ಲಾ ಕಡೆಯಿಂದ ನನ್ನನ್ನೇ ಹುಡುಕಿ ಬಂದ ಹಾವುಗಳು ಒಮ್ಮೆಲೇ ಕಚ್ಚಿದಂತೆನಿಸಿ ಮೈ ಮನಸು ವಿಚಿತ್ರ ಯಾತನೆಯಿಂದ ನಲುಗುತ್ತಿತ್ತು. ಆಫೀಸಿನ ಎಲ್ಲರೂ ಮನೆಗೆ ಹೋದ ನಂತರವೂ ಅವರಿಗಾಗಿ ಕಾಯುವ ಕೆಟ್ಟ ಸ್ಥಿತಿಯಲ್ಲಿ ಕುಳಿತು ಕಾಯುತ್ತಿದ್ದೆ.

ಪಕ್ಕದಲ್ಲಿದ್ದ ತಿಳಿ ನೀಲಿ ಬಣ್ಣದ ಸ್ವಿಮಿಂಗ್ ಪೂಲ್ ಅವರ ಮನದ ನಿರಾಳತೆಯನ್ನು ಪ್ರತಿಬಿಂಬಿಸುತ್ತಿತ್ತು. ಗಿಡಗಳ ಮೇಲೆ ಬಳ್ಳಿಗಳಂತೆ ಹಬ್ಬಿದ್ದ ಹಸಿರು ಬಣ್ಣದ ಲೈಟ್‌ಗಳು ಗಿಡಗಳನ್ನೇ